## ಹಳ್ಳಿ ಸೊಗಡಿದ್ದರೆ ಚೆನ್ನ

ಝೀ ಕನ್ನಡ ವಾಹಿನಿಯಲ್ಲಿ ಪ್ರತಿ ದಿನ ಸಂಜೆ 7.30ಕ್ಕೆ ಪ್ರಸಾರವಾಗುವ 'ಶ್ರೀಮಾನ್ – ಶ್ರೀಮತಿ' ಧಾರಾವಾಹಿ ಉತ್ತಮವಾಗಿ ಮೂಡಿಬರ್ತಿದೆ. ಇಲ್ಲಿನ ಪಾತ್ರಧಾರಿಗಳ ನೈಜ ಅಭಿನಯ ನಗು ಉಕ್ಕಿಸುತ್ತದೆ. ಈ ಧಾರಾವಾಹಿಯ ಪ್ರಮುಖ ಗುಣಾತ್ಮಕ ಅಂಶ ಭಾಷೆ. ಚಾಮರಾಜನಗರ ಭಾಗದ ಭಾಷೆಯನ್ನು ಧಾರಾವಾಹಿ ಸಮರ್ಥವಾಗಿ ಬಳಸಿಕೊಂಡಿದೆ. ಆಯಾಯ ಪ್ರಾಂತ್ಯದ ಭಾಷೆಗೆ ಅದರದ್ದೆ ಆದ ಸೊಗಡಿರುತ್ತದೆ. ಆ ಆಧಾರದ ಮೇಲೆಯೇ ಕೆಲವು ಧಾರಾವಾಹಿಗಳು ಗೆದ್ದಿವೆ. ಉದಾಹರಣೆಗೆ: ಮೂಡಲಮನೆ, ಮುತ್ತಿನ ತೋರಣ ಇತ್ಯಾದಿ. ಇವುಗಳನ್ನು ಬಿಟ್ಟರೆ ಎಲ್ಲಾ ಧಾರಾವಾಹಿಗಳ ಭಾಷೆ, ಕಥೆ ಎಲ್ಲವೂ ನಗರ ಕೇಂದ್ರಿತವಾಗಿದ್ದು ಬೋರು ಹೊಡೆಸುತ್ತವೆ. ಇಂತಹ ಸಮಯದಲ್ಲಿ ಅಪರೂಪಕ್ಕೆ ಇಂತಹ ಧಾರಾವಾಹಿಗಳು ಮುದ ನೀಡಿ ರಂಜಿಸುತ್ತವೆ. ಇದರಲ್ಲಿ ಗೌಡ್ರ ಸಂಭಾಷಣಾ ಶೈಲಿ ಎಕ್ಸಲೆಂಟ್.

–ಶೀಲಾ ಸತ್ಯೇಂದ್ರ ಸ್ವಾಮಿ, ಚಾಮರಾಜನಗರ

## 'ಸೌಭಾಗ್ಯವತಿ' ಅಲ್ಲ 'ದೌರ್ಭಾಗ್ಯವತಿ'

ವಿಜಯ್ ಎಂಬ ಸಿಡುಕು ಮೋರೆಯ ಒರಟು ವರ್ತನೆಯ, ಸಂಶಯ ಪಿಶಾಚಿ, ಹೆಂಡತಿಯ ಬಸಿರಲ್ಲಿ ಬೆಳೆಯುತ್ತಿರುವ ತನ್ನದೇ ಮಗುವನ್ನು ವಿಷವುಣಿಸಿ ಸಾಯಿಸಲೆತ್ನಿಸುವ ರಾಕ್ಷಸ ಗಂಡನೊಂದಿಗೆ ಸಂಸಾರ ಕಟ್ಟಿಕೊಂಡು ನರಳುತ್ತಿರುವ ಅರುಂಧತಿಯನ್ನು ಕಂಡಾಗ ಅಯ್ಯೋ ಪಾಪ ಅನಿಸುತ್ತದೆ. ಕಲರ್ಸ್ ಟಿ ವಿ ಯವರ 'ಸೌಭಾಗ್ಯವತಿ, ಧಾರಾವಾಹಿಯ ಹೆಸರನ್ನು ದಯವಿಟ್ಟು 'ದೌರ್ಭಾಗ್ಯವತಿ' ಎಂದು ಬದಲಾಯಿಸಿರಿ; ಇಲ್ಲವೇ ನಮ್ಮ ಮತ್ತು ಅರುಂಧತಿಯ ಸಂಕಟವನ್ನು ಕೊನೆಗಾಣಿಸಲು ಈ ಧಾರಾವಾಹಿಯನ್ನೇ ನಿಲ್ಲಿಸಿಬಿಡಿ.

–ಅದಮಾರು ಶ್ರೀಪತಿ ಆಚಾರ್ಯ, ಉಡುಪಿ

## ಇಂಗ್ಲಿಷ್– ಹಿಂದಿ ವ್ಯಾಮೋಹ

'ಕರ್ನಾಟಕ ಮೋಸ್ಟ್ ವಾಂಟೆಡ್', 'ಕರ್ನಾಟಕ ಐಡಲ್', 'ಲೀಡರ್ ವಿತ್ ದಿವಾಕರ', 'ದಯಾನಂದ ಧಮಾಕ', 'ಸ್ಟ್ರೈಟ್ ಹಿಟ್', 'ಮೋಟೋ ಶೋ' (ಇದು ವೀಲಿಂಗ್ ದುನಿಯಾ), 'ಜನತಾ ಅದಾಲತ್' ಮತ್ತು 'ವಾರ್ಡ್ ಜಂಕ್ಷನ್', 'ಕಾರ್ಪೊರೇಟ್ ಕಮಿಟ್ ಮೆಂಟ್'...... ಇವು ಒಂದು ಕನ್ನಡ ಟಿ ವಿ ವಾಹಿನಿಯವರು ಹೊಸ ಪ್ರೇರಣೆ, ಹೊಸ ಉತ್ಸಾಹದಿಂದ ಕನ್ನಡಿಗರಿಗಾಗಿ ಪ್ರಸ್ತುತ ಪಡಿಸಿರುವ ಹೊಚ್ಚ ಹೊಸ ವಿನೂತನ ಕಾರ್ಯಕ್ರಮಗಳ ಹೆಸರುಗಳು.

ಕನ್ನಡ ವಾಹಿನಿಗಳ ಮೂಲಕ ಅಡುಗೆ ಕಲಿಯಲು ಹೋಗಿ ಇಂಗ್ಲಿಷ್ ಕಲಿತೆ ಎನ್ನುವ ಮಾತು ಪ್ರಚಲಿತ ಇರುವಾಗಲೇ, ಈ ವಾಹಿನಿಯ ಹೊಸ ಕಾರ್ಯಕ್ರಮಗಳ ಹೆಸರುಗಳು ಬೆಂಗಳೂರೇತರ ಕನ್ನಡಿಗರಿಗೆ ಶಾಕ್ ನೀಡಿವೆ. ಕನ್ನಡೇತರರು ಹೆಚ್ಚು ಹೆಚ್ಚು ತಮ್ಮ ಭಾಷೆಗೆ ಒತ್ತು ನೀಡುವಾಗ ಮತ್ತು ಅಮಿತಾಬ್ ಬಚನ್ ಅವರ 'ಕೌನ್ ಬನೇಗಾ ಕರೋಡ್‌ಪತಿ'ಯಂಥ ಕಾರ್ಯಕ್ರಮಗಳು ಕೊನೆ ಕೊನೆಗೆ ಸಂಪೂರ್ಣ ಹಿಂದಿಮಯವಾಗಿರುವಾಗ, ಕನ್ನಡದ ಚಾನೆಲ್‌ಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಯತ್ತ ಹೊರಳುವುದು ವಿಷಾದನೀಯ. ಈ ವಾಹಿನಿಯು ಈ ನಿಟ್ಟಿನಲ್ಲಿ ಮುದ್ರಣ ಮಾಧ್ಯಮದಲ್ಲಿ ನೀಡಿದ ಮುಖಪುಟದ ಜಾಹೀರಾತುಗಳನ್ನು ನೋಡಿ ಕನ್ನಡ ತಾಯಿ ಭುವನೇಶ್ವರಿ ಕುಸಿದು ಬೀಳದಿರುವುದು ಪುಣ್ಯ.

—ಡಾ. ಅನಿಕೇತ್ ಶರ್ಮಾ, ಬೆಂಗಳೂರು

**ವಾರದ ಪತ್ರ**

## ಧಾರಾವಾಹಿಯ ಪ್ರಭಾವ

ನನ್ನ ತಮ್ಮನ ಮಗಳು ಮೂರು ವರ್ಷದ ಶುಭದಾ ತುಂಬಾ ತುಂಟಿ. ಆಕೆಯ ತುಂಟತನ ತಡೆಯಲಾರದೆ ನನ್ನ ಅಮ್ಮ 'ಪೊಲೀಸರು ಬರ್ತಾರೆ, ಗರುಡ ಜೀಪ್ ಬರುತ್ತೆ, ಗಲಾಟೆ ಮಾಡೋರನ್ನ ಕರ್ಕೊಂಡು ಹೋಗ್ತಾರೆ' ಎಂದು ಭಯ ಹುಟ್ಟಿಸಿದ್ದರು. ಪೊಲೀಸರು, ಗರುಡ ಎಂದಾಕ್ಷಣ ಆಕೆ ಗಲಾಟೆ ಮಾಡೋದನ್ನ ನಿಲ್ಲಿಸುತ್ತಿದ್ದಳು.

ಅಷ್ಟರಲ್ಲಿ ಒಂದು ದಿನ ಕಲರ್ಸ್ ಕನ್ನಡ ವಾಹಿನಿಯಲ್ಲಿ 'ಕಿನ್ನರಿ' ಧಾರಾವಾಹಿ ಪ್ರಸಾರವಾಗುತ್ತಿತ್ತು. ಮಣಿ ಹಾಸ್ಟೆಲ್‌ನಿಂದ ತಪ್ಪಿಸಿಕೊಂಡಿದ್ದಳು. ಆಕೆಯನ್ನು ಕೆಲಸಕ್ಕಿಟ್ಟುಕೊಂಡು ಕಾಟ ಕೊಡುತ್ತಿದ್ದವ ಮಣಿಯನ್ನು ಹೆದರಿಸುತ್ತಿದ್ದ. 'ಪೊಲೀಸರು ನಿನ್ನನ್ನು ಹುಡುಕುತ್ತಿದ್ದಾರೆ. ನೀನು ಸಿಕ್ಕರೆ ನಿನಗೆ ಹೊಡೆಯುತ್ತಾರೆ. ಹಾಸ್ಟೆಲ್‌ಗೆ ಕಳಿಸ್ತಾರೆ' ಎಂದು ಹೇಳುತ್ತಿದ್ದ. ಇದನ್ನು ಕೇಳಿಸಿಕೊಂಡ ನಮ್ಮ ಶುಭದಾ ಗಂಭೀರಳಾದಳು. ನಂತರ ಆ ಧಾರಾವಾಹಿಯಲ್ಲಿ ಪೊಲೀಸ್ ಅಧಿಕಾರಿ ಮಣಿಯನ್ನು ರಕ್ಷಿಸಿ ಆಕೆಯ ಪೋಷಕರಿಗೆ ಒಪ್ಪಿಸುತ್ತಾರೆ. ಇದಾದ ಕೆಲದಿನಗಳ ನಂತರ ನಮ್ಮ ಶುಭದಾ 'ನನಗೆ ಪೊಲೀಸರನ್ನು ಕಂಡರೆ ಭಯವಿಲ್ಲ. ಪೊಲೀಸರು ಒಳ್ಳೆಯವರು. ಅವರು ನಮಗೆ ಹೊಡೆಯಲ್ಲ. ಅವರು ನಮ್ಮನ್ನು ಕಾಪಾಡುತ್ತಾರೆ' ಎಂದಳು. ಒಳ್ಳೆಯ ಧಾರಾವಾಹಿಯೊಂದು ಪುಟ್ಟ ಮಗುವಿನ ಮನಸ್ಸಿನ ಮೇಲೆಯೇ ಇಷ್ಟೊಂದು ಪ್ರಭಾವ ಬೀರುವಾಗ, ಇದೇ ವಾಹಿನಿಯಲ್ಲಿ ಪ್ರಸಾರವಾಗುವ ಉಳಿದೆಲ್ಲ ಧಾರಾವಾಹಿಗಳಲ್ಲಿ ಬರುವ ಕ್ರೌರ್ಯ, ವಂಚನೆ, ಮೋಸ, ಅಕ್ರಮ ಸಂಬಂಧ ಮುಂತಾದ ದುರ್ಬುದ್ಧಿಗಳುಳ್ಳ ದೃಶ್ಯಗಳು ಸಮಾಜದ ಮೇಲೆ ಎಂತಹ ಪರಿಣಾಮ ಬೀರಬಹುದು?

–ಪಿ.ಜೆ.ರಾಘವೇಂದ್ರ, ಮೈಸೂರು

## ಕಿನ್ನರಿಯ ಚೆಲುವು

ಈಟಿವಿ ವಾಹಿನಿಯಲ್ಲಿ ಸಾಯಂಕಾಲ 6 ಗಂಟೆಗೆ ಪ್ರಸಾರವಾಗುತ್ತಿರುವ 'ಕಿನ್ನರಿ' ಧಾರಾವಾಹಿ ತುಂಬಾ ಚೆನ್ನಾಗಿ ಬರುತ್ತಿದೆ. ಅದರಲ್ಲೂ ಮಣಿ ಪಾತ್ರಧಾರಿ ಚಿಕ್ಕ ಹುಡುಗಿಯ ಅಭಿನಯ ಸೊಗಸಾಗಿದೆ. ಕೆಲವು ಸನ್ನಿವೇಶಗಳು ಮನ ಮಿಡಿಯುವಂತೆ, ಕುತೂಹಲದಿಂದ ಕೂಡಿವೆ. ಹ್ಯಾಟ್ಸ್ ಆಫ್ ಕಿನ್ನರಿಗೆ.

–ಶ್ರೀಧರ ರಾಯಸಂ, ಗೀತಾ ರಾಯಸಂ, ಬೆಂಗಳೂರು

## ಕಿಚ್ಚನ ನಡೆ ಸರಿಯಲ್ಲ

ಬಿಗ್ ಬಾಸ್ 19.12.15 ಶನಿವಾರದ ಸಂಚಿಕೆಯಲ್ಲಿ ಸುದೀಪ್ 'ಜನಗಣಮನ' ರಾಷ್ಟ್ರಗೀತೆ ಹಾಡಿ ಎಬ್ಬಿಸಲು ಯತ್ನಿಸಿದ್ದೇನೊ ಸರಿ. ಆದರೆ ಮಧ್ಯದಲ್ಲೇ ಅದನ್ನು ನಿಲ್ಲಿಸಿದ್ದು ತಪ್ಪೆನಿಸಲಿಲ್ಲವೇ? ಸುದೀಪ್‌ರಂತಹ ವ್ಯಕ್ತಿಗಳು ಬೇರೆಯವರಿಗೆ ತಿಳಿಹೇಳಬೇಕು. ಅಂತಹದರಲ್ಲಿ ಅವರು ಹೀಗೆ ಮಾಡಿದರೆನ್ನುವುದು ಬೇಸರ ಸಂಗತಿ.

–ಪ್ರಕೃತಿ ಹೊಸಪಟ್ಟಣಕರ, ಮಾನ್ವಿ

## ಅಭಿರುಚಿ ಇರಲಿ

ಕನ್ನಡ ಕಲರ್ಸ್‌ನಲ್ಲಿ ಪ್ರಸಾರವಾಗುತ್ತಿರುವ ಬಿಗ್ ಬಾಸ್ ರಿಯಾಲಿಟಿ ಶೋದಿಂದ ನಾಡಿನ ಇಡೀ ಸಂಸ್ಕೃತಿ ಮೇಲೆ ಕೆಟ್ಟ ಪರಿಣಾಮವಾಗುತ್ತಿದೆ. ಮನರಂಜನೆ ನೆಪದ ಈ ಕಾರ್ಯಕ್ರಮ ಕೀಳುಮಟ್ಟದ ಅಭಿರುಚಿಯಿಂದ ಕೂಡಿದೆ. ಮನೆ ಮಂದಿಯೆಲ್ಲಾ ಕುಳಿತು ನೋಡಹುದಾದ ರಿಯಾಲಿಟಿ ಶೋ ಆಗಲು ಸಾಧ್ಯವಿಲ್ಲ. ಇದು ಮಕ್ಕಳ ಮೇಲೆ ಮತ್ತು ಯುವ ಜನಾಂಗದ ಮೇಲೆ ಬಹಳ ದುಷ್ಪರಿಣಾಮ ಬೀರುತ್ತದೆ.

ಟಿ.ಆರ್.ಪಿ. ಹೆಚ್ಚಿಸುವ ದೃಷ್ಟಿಯಿಂದ ಅನವಶ್ಯಕವಾಗಿ ವಿವಾದಗಳನ್ನು ಸೃಷ್ಟಿ ಮಾಡಲಾಗುತ್ತಿದೆ. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಮಾತನಾಡುವ ರೀತಿ, ವರ್ತನೆ, ಧರಿಸುವ ವಿಚಿತ್ರ ರೀತಿಯ ಉಡುಗೆ ತೊಡುಗೆಗಳು, ಕುಳಿತುಕೊಳ್ಳುವ ಮತ್ತು ಮಲಗುವ ಭಂಗಿಗಳು, ಶಾರ್ಟ್ಸ್ ಧರಿಸಿ ಒಬ್ಬರನ್ನೊಬ್ಬರು ಆಲಂಗಿಸುವುದು, ಯಾವ ಕಾರಣವೇ ಇಲ್ಲದೇ ಚೀರಾಡುವುದು ಮತ್ತು ಕುಣಿಯುವುದು ಇತ್ಯಾದಿ ಪ್ರಹಸನಗಳು ಸಭ್ಯತೆ ಮೀರಿದ್ದವಾಗಿದ್ದು, ವೀಕ್ಷಕರಿಗೆ ಮುಜುಗರ ಉಂಟು ಮಾಡುತ್ತಿವೆ. ಆಗಾಗ ನಗುವುದು, ಅಳುವುದು ಮತ್ತು ಮಾನಗೇಡಿಗಳಂತೆ ಅಶ್ಲೀಲ ಭಂಗಿಗಳಲ್ಲಿ ಕಾಣಿಸಿಕೊಳ್ಳುವುದು ನೋಡುಗರಿಗೆ ಹಿಂಸೆ ಎನಿಸುತ್ತದೆ. ಇನ್ನು ಮೇಲಾದರೂ ಜವಾಬ್ದಾರಿ ಅರಿತು ಬಿಗ್ ಬಾಸ್ ಕಾರ್ಯಕ್ರಮದ ಬದಲು ಮಕ್ಕಳಿಗೆ ಉಪಯೋಗವಾಗುವ ಎದೆ ತುಂಬಿ ಹಾಡುವೆನು, ಯುವಕರಿಗೆ ಜ್ಞಾನ ಹೆಚ್ಚಿಸಿಕೊಳ್ಳಲು ಅನುಕೂಲವಾಗುವ ಕನ್ನಡ ಕೋಟ್ಯಾಧಿಪತಿ ಅಂತಹ ಉತ್ತಮ ಸದಭಿರುಚಿ ಮತ್ತು ಮನರಂಜನೆಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವತ್ತ ಗಮನಹರಿಸುವುದು ಸೂಕ್ತ.

–ಪಂಪಾಪತಿ ಹಿರೇಮಠ, ಧಾರವಾಡ





# ನಿರೂಪಣೆ ಕಲಿಸುವುದಲ್ಲ!

★ *ನಿರೂಪಣೆ ಕನ್ನಡಕ್ಕೆ ಸೀಮಿತವಾಗುತ್ತೋ ಅಥವಾ ಮಿಶ್ರವಾಗುತ್ತೋ?*

ನಾನೂ ಕನ್ನಡದವನೆ. ಬೆಂಗಳೂರಿನಲ್ಲಿಯೇ ಹುಟ್ಟಿದ್ದು, ಕೊಡಗಿನ ವಸತಿ ಶಾಲೆಯಲ್ಲಿ ಓದಿದ್ದು. ಪದವಿಯನ್ನು ಕೊಯಮತ್ತೂರಿನಲ್ಲಿ ಮಾಡಿದ್ದೇನೆ. ಸಂಪೂರ್ಣ ಕನ್ನಡದಲ್ಲಿಯೇ ಮಾತನಾಡುವ ಪ್ರಯತ್ನ ನನ್ನದು. ಮುಂದಿನ 13 ವಾರ ಕಾದು ನೋಡಿ. ಇದು ನನ್ನ ಮೊದಲ ಪಯತ್ನ. ವೀಕ್ಷಕರು ನೋಡಿ ಬೆಂಬಲಿಸಬೇಕು ಎನ್ನುವುದು ನನ್ನ ಮನವಿ. ಹಿಂದಿ, ಇಂಗ್ಲಿಷ್‌ನಲ್ಲಿ ನೇರ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದೇನೆ. ಕನ್ನಡದ ಟಿವಿಯಲ್ಲಿ ಇದು ಮೊದಲ ಹೆಜ್ಜೆ ಎಂದಷ್ಟೇ ಹೇಳುತ್ತೇನೆ.

★ *ನಿರೂಪಣೆಯನ್ನು ಹೇಗೆ ನಿಮ್ಮದಾಗಿಸಿಕೊಂಡಿದ್ದು?*

ಇದನ್ನು ಸಹಜವಾಗಿ ರೂಢಿಯಿಂದ ಕಲಿತಿದ್ದೇನೆ... ಕಲಿಯುತ್ತಿದ್ದೇನೆ. ಇದಕ್ಕಾಗಿ ನಾನು ಯಾವ ತಾಲೀಮು ಮಾಡಿಲ್ಲ. ಇದಕ್ಕಾಗಿ ತರಬೇತಿಯನ್ನೂ ಪಡೆದಿಲ್ಲ. ನಾನು ಓದಿದ ಕೊಡಗಿನ ವಸತಿ ಶಾಲೆಯಲ್ಲಿ ಪ್ರತಿ ಶನಿವಾರ ಕಾರ್ಯಕ್ರಮಗಳು ಇರುತ್ತಿದ್ದವು. ಆಗಿನ ಎಲ್ಲಾ ಕಾರ್ಯಕ್ರಮಗಳ ನಿರ್ವಹಣೆಯನ್ನು ನಾನೇ ಮಾಡುತ್ತಾ ಮಾಡುತ್ತಾ ಕಲಿತೆ. ರೇಡಿಯೋ ಮೂಲಕ ನಾನು ವೃತ್ತಿ ಬದುಕನ್ನು ಪ್ರವೇಶ ಮಾಡಿದೆ. ಆರಂಭದಲ್ಲಿ ನಾನೇ ನಿರ್ಮಾಣವನ್ನೂ ಮಾಡುತ್ತಿದ್ದೆ. ಸ್ಕ್ರಿಪ್ಟ್ ಇಲ್ಲದೆ, ನೇರವಾಗಿ ನಿರ್ವಹಿಸುವ ಈ ಕಾರ್ಯಕ್ರಮ ಆ ಕ್ಷಣದಲ್ಲಿಯೇ ಹುಟ್ಟುವಂತಹದ್ದು. ಇದಕ್ಕೆ ತರಬೇತಿ, ತರಗತಿ ಇಲ್ಲ. ನಮ್ಮ ಕೌಶಲ್ಯದ ಮೇಲೆ ನಡೆಯುತ್ತದೆ.

★ 'ನೀವು ಭಲೇ ಕಿಲಾಡಿ' ಹೇಗೆ ಭಿನ್ನವಾಗಿದೆ?

ಸಂಪೂರ್ಣ ಯುವಕರನ್ನು ಒಳಗೊಂಡ ಕಾರ್ಯಕ್ರಮ. ಇಲ್ಲಿನ ಸ್ಪರ್ಧಾಳುಗಳು ಸೆಲೆಬ್ರಿಟಗಳಲ್ಲ. ವೀಕ್ಷಕರ ಸಹಭಾಗಿತ್ವದಲ್ಲಿ ನಡೆಯುವ, ವೀಕ್ಷಕರ ಕಾರ್ಯಕ್ರಮ ಎನ್ನುವುದು ಬಹಳ ಮುಖ್ಯ ಎಂದು ಭಾವಿಸುತ್ತೇನೆ. ಇಲ್ಲಿ ಮೂರು ಹಂತದ ಪರೀಕ್ಷೆ ಇರುತ್ತದೆ. ಎಲ್ಲದೂ ಅವರವರ ಕೌಶಲ್ಯದಿಂದ ನಿರ್ಧಾರವಾಗುತ್ತದೆ. ಅಪಾರ ಬುದ್ಧಿವಂತಿಕೆ, ಶಿಕ್ಷಣ, ಓದು ಇದ್ದರೆ ಮಾತ್ರ ಇದು ಸಾಧ್ಯ ಎನ್ನುವಂತಿಲ್ಲ. ವೀಕ್ಷಕರು ನೀಡಿದ ಉತ್ತರದಲ್ಲಿ ಯಾವುದು ಸರಿ ಎಂಬ ಊಹೆ ಮಾಡಿದರೆ ಸಾಕು ಮೊದಲನೇ ಹಂತ ಯಶಸ್ವಿಯಾಗುತ್ತದೆ.

ಅಂತೆಯೇ 'ಡವ್‌ಗುರು' ಇದು ಯುವಕರು ತಮ್ಮ ಪ್ರೇಯಸಿಯ ಬಳಿ ಪ್ರೇಮ ನಿವೇದಿಸಿಕೊಳ್ಳುವ ಮುನ್ನ ಮನಸೆಳೆಯುವ ಪ್ರಯತ್ನ. ಯಾರೂ ಎಲ್ಲಿಯೂ ಕಲಿತು ಪ್ರೀತಿ ಮಾಡುವುದಿಲ್ಲ. ಪ್ರತಿಯೊಬ್ಬರೂ ಅವರವರ ದಾರಿಯಲ್ಲಿ ಪ್ರಿಯತಮೆಯನ್ನು ಪಡೆದಿರುತ್ತಾರೆ. ಅದನ್ನು ಇಲ್ಲಿ ಸ್ವಲ್ಪ ನಾಜೂಕಾಗಿ ಪ್ರದರ್ಶಿಸಿದರೆ ಸಾಕು.

ಮೂರನೇ ಹಂತ ಸಂಪೂರ್ಣ ವಾಸ್ತವ ಪ್ರಜ್ಞೆಯ ಮೇಲೆ ನಿಂತಿರುತ್ತದೆ. ಯಾವುದೇ ಸಂದರ್ಭ– ಸನ್ನಿವೇಶವನ್ನು ಎದುರಿಸುವ ಜಾಣ್ಮೆಯ ಮೇಲೆ ನಿರ್ಧಾರವಾಗುತ್ತದೆ. ಸಾಮಾನ್ಯಅರಿವು (ಕಾಮನ್ ಸೆನ್ಸ್) ಗೆಲುವಿನ ಮೆಟ್ಟಿಲಾಗುತ್ತದೆ. ಒಟ್ಟಾರೆ ಕಾರ್ಯಕ್ರಮವನ್ನು ಹಾಡು, ಡಾನ್ಸ್, ತಮಾಷೆ, ಲೇವಡಿಯ ಮೂಲಕ ವೀಕ್ಷಕರನ್ನು ಮೆಚ್ಚಿಸುವಂತೆ ರೂಪಿಸಿದ್ದೇವೆ.

★ *ಸ್ಮರಣೀಯ ನಿಮ್ಮ ಕಾರ್ಯಕ್ರಮಗಳು ಎಂದರೆ...*

ಆಗಲೂ ರೇಡಿಯೋ ನಿರೂಪಕ, ಈಗಲೂ ಕೂಡ. ಐಸಿಸಿ ವರ್ಲ್ಡ್‌ಕಪ್, ಪ್ರೊ ಕಬ್ಬಡ್ಡಿ ಸ್ಪರ್ಧೆಗಳ ವಿವರಣೆಯನ್ನು ಹಿಂದಿ ಹಾಗೂ ಇಂಗ್ಲಿಷ್‌ವಾಹಿನಿಗಳಲ್ಲಿ ನಡೆಸಿಕೊಟ್ಟಿದ್ದೇನೆ. ಕಂಟೆಂಟ್ ಕ್ರಿಯೇಟ್ ಮಾಡುವುದು ನನ್ನ ಮೆಚ್ಚಿನ ಹವ್ಯಾಸ ಅದೇ ವೃತ್ತಿ ಬದುಕಾಗಿದೆ. ತಕ್ಷಣಕ್ಕೆ ಸಂದರ್ಶಕರನ್ನು ತಬ್ಬಿಬ್ಬಾಗುವಂತೆ ಪ್ರಶ್ನೆಯ ಮಳೆಗರೆಯಬಲ್ಲೆ. ಈ ವಿಶ್ವಾಸವೇ ನನ್ನನ್ನು ನಿರೂಪಣೆಯಲ್ಲಿ ತೊಡಗುವಂತೆ ಮಾಡಿದೆ. ಖಾಸಗಿ ಕಾರ್ಯಕ್ರಮಗಳು ಸೇರಿದಂತೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತೇನೆ. ಇದಕ್ಕೆಲ್ಲಾ ನನ್ನ ತಾಯಿ ಯಾಸ್ಮಿನ್ ಸೇಟ್ ಪ್ರೋತ್ಸಾಹವೇ ಕಾರಣ. ಆಕೆಗೆ ನಾವಿಬ್ಬರು ಮಕ್ಕಳು. ನನ್ನಕ್ಕ ವೃತ್ತಿ ನಿರೂಪಕಿಯಾಗಿದ್ದಾರೆ. ಅವರೂ ನನ್ನ ಮೇಲೆ ಪ್ರಭಾವ ಬೀರಿದ್ದಾರೆ. ಇದರ ಜೊತೆ ಹಿಂದಿ ಸಿನಿಮಾ ಒಂದಕ್ಕೆ ಸ್ಕ್ರಿಪ್ಟ್ ಬರೆಯುವ ಚಿಂತನೆಯೂ ಇದೆ.

■ ರಾಗು



ದಾನಿಷ್ ಸೇಟ್
ಸುವರ್ಣದ 'ನೀವು ಭಲೇ ಕಿಲಾಡಿ' ನಿರೂಪಕ